SATYAVADI Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 112 | ಬುಧವಾರ 26—12—45. | ಬಿಡಿ ಪ್ರತಿ 3 ಸೈ

ಶಾಂತಿ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನವಿಲ್ಲ

ಲಂಡನ್ ಡಿ 24 — ಶಾಂತಿ ಸಮ್ಮೇಳನವು ಏಪ್ರೆಲ್ ಕಡೆಯಲ್ಲಿ ಸೇರುವದಾಗಿ ಶಾಂತಿ ಕರಾರುಗಳ ಒಗ್ಗೆ ಭಾರಿ ಮೂರು ವಿದೇಶ ಮಂತ್ರಿಗಳಲ್ಲಿ ಒಪ್ಪಂದವಾಗಿರುವುದೆಂದೂ ಪ್ರಾಥಮಿಕ ಕಾರ್ಯವು ಲಂಡನ್ನಿನಲ್ಲಿ ಕೂಡಲೇ ಆರಂಭವಾಗಬೇಕೆಂದು ಹೇಳಲಾಗಿದೆ. ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನವಿಲ್ಲ.

ಲಂಡನ್, ಡಿ 24 — ಲಂಡನ್ನಿನಲ್ಲಿ ಸ್ವರಾಜ್ಯ ಭವನದವರು ಭಾರತ ರಾಷ್ಟ್ರೀಯ ಮಹಾಸಭೆಯ ವಜ್ರೋತ್ಸವವನ್ನು ಭಾನುವಾರ ವೈಭವದಿಂದ ನೆರವೇರಿಸುವರು.

ಬೊಂಬಾಯಿ, ಡಿ 25 — 5610 ಮೈಲಿಯಾಚೆ ಭೂಕಂಪವಾದದ್ದು ಕೊಡೈಕಾಲ ಅಬ್ಸರ್ವೇಟರಿಯಲ್ಲಿ ರಿಕಾರ್ಡಾಗಿದೆ.

ನವದೆಹಲಿ, ಡಿ 24 — ಸುಲಿಯಾದ ಐ. ಎಚ್. ಎ. ಖೈದಿಗಳ ರಕ್ಷಣಾರ್ಥವಾಗಿ ಐವರು ಜನ ಲಾಯರನ್ನು ಇಲ್ಲಿಂದ ಭಾರತ ಸರ್ಕಾರ ಕಳುಹಿಸಿತ್ತು.

ಕಲ್ಕತ್ತಾ, ಡಿ 24 — ಗಾಂಧೀಜಿ ವೈಸರಾಯರನ್ನು ಜನವರಿ 4 ರಲ್ಲಿ ಭೇಟಿ ಮಾಡುವರು.

ನುದಂತಾಸು, ಡಿ 22 — ತಿರುವಳ್ಳಿಕೇಣಿಯಲ್ಲಿ ನಾಳೆ ಜಿನ್ನಾರವರ ವರ್ಧಂತ್ಯುತ್ಸವದ ಪ್ರಯುಕ್ತ ನೆರವಣಿಗೆ ನಡೆಸಲು ಮುಸ್ಲಿಂ ಲೀಗಿಗೆ ಪೋಲೀಸು ಕಮಿಷನರು ಅನುಮತಿಕೊಡಲಿಲ್ಲ.

ಬೊಂಬಾಯಿ, ಡಿ 25 — ಬಿ ಬಿ ಸಿ ಐ ರೈಲ್ವೆಯ ನೇಮಿಜ್ ಆಜ್ಮೀರ್ ಸೆಕ್ಷನ್ನಿನಲ್ಲಿನ ಖಂಭಾವುರ ಮತ್ತು ಸಿಂಬಹೇರ ಮಧ್ಯೆ ಒಂದು ರೈಲ್ವೆ ಸೇತುವೆ ಹತ್ತಿರ ಒಂದು ಗುಡ್ಸ್ ರೈಲಿಗೆ ಅಪಘಾತವುಂಟಾಗಿ ಗಾರ್ಡು ಸೇರಿ ನಾಲು ಮಂದಿ ಹತರಾದರು. ಕೆಲವು ವ್ಯಾಗನ್ನುಗಳು ನೀರಿಗೆ ಬಿದ್ದಿವೆ.

ಲಂಡನ್ ಡಿ 24— ಅಮೇರಿಕಾದಲ್ಲಿಯ ಬೆಳ್ಳಿಯನ್ನು ಹೊರಕ್ಕೆ ರಫ್ತು ಮಾಡಲು ಅನುಕೂಲಿಸುವ ಮಸೂದೆಯು ಮಂಜೂರಾಯಿತು.

ಜೆರೂಸೆಲಂ ಡಿ 24— ಬೆಲ್‌ಗೇರಿಯಾದಿಂದ 140 ಮಂದಿ ಯಹೂದ್ಯರು ಬಂದಿರುವರು.

ಬೊಂಬಾಯಿ ಡಿ 24 — ಸೆಂಟಿನಲ್ ಪತ್ರಿಕೆಯ ಸಂಪಾದಕತ್ವವನ್ನು ಬಿ. ಜಿ. ಹಾರ್ನಿಮನ್ನರು ಬಿಟ್ಟುಬಿಟ್ಟರು.

ಊಟಿ, ಡಿ 22 — ಮೂರು ತಿಂಗಳಿಂದಲೂ ಮಳೆಯಿಲ್ಲದೆ ಆಲುಗಡ್ಡೆ ಬೆಳೆ ಚಿಂತಾಜನಕವಾಗಿದೆ.

ಸಿಮ್ಲಾ ಡಿ 24 — ಸಿಮ್ಲಾ ಸಬಹದ್ದಿನಲ್ಲಿನ ಸಂಜವಳೀ ಬಜಾರಿನಲ್ಲಿ ಸ್ಫೋಟವಾಗಿ 20 ಅಂಗಡಿಗಳು ಸುಟ್ಟುಹೋದವು.

ಲಂಡನ್ ಡಿ 24— 390 ಟನ್ ಬೆಳ್ಳಿಯು ಅಮೇರಿಕಾದಿಂದ ಗುಟ್ಟಾಗಿ ಭಾರಿ ಕಾವಲಿನೊಡನೆ ತರಲಾಗಿದೆ. ಇದನ್ನು ಭಾರತದಲ್ಲಿ ಬಿಕರಿ ಮಾಡಲಾಗುವುದೆಂದು ಹೇಳಲಾಗಿದೆ.

ಕಲ್ಲಿಜ್ಜಲಿಂದ ಬೆಣ್ಣೆ

ಬರ್ಲಿನ್ ಡಿ 22 — ಯುದ್ಧಕಾಲದಲ್ಲಿ ಜರ್ಮನ್ ಸೈನ್ಯವು ಉಪಯೋಗಿಸುತ್ತಿದ್ದ ಕೆಲ್ಲಿಜ್ಜಲಿಂದ ತಯಾರಾಗುವ ಬೆಣ್ಣೆಯನ್ನು ಕಂಡುಹಿಡಿದ ಅರ್ಧ—ಯಹೂದ್ಯನು 5 ಲಕ್ಷ ಪೌಂಡು ವ್ಯಯದಿಂದ ಕಾರ್ಖಾನೆ ಸ್ಥಾಪಿಸಬೇಕೆಂದಿರುವನು. ಇದಾದರೆ ಅವನು ವರ್ಷಕ್ಕೆ 35 ಸಾವಿರ ಟನ್ ಕೊಬ್ಬನ್ನು ತಯಾರಿಸಿ, ಪೌಂಡಿಗೆ 6 ಪೆನ್ನಿಸಂತೆ ದೊರಯುವಂತೆ ಮಾಡುವನೆಂದು ಹೇಳುತ್ತಾನೆ.

.....

ನಾಜೀ ಚಳುವಳಿ

ಲಂಡನ್ ಡಿ 23— ದೊಡ್ಡ ದೊಡ್ಡ ಜರ್ಮನ್ ಪಟ್ಟಣಗಳಲ್ಲಿ ನಾಜೀ ಚಳುವಳಿ ಕಾಣಬರುತ್ತಿರುವದೆಂದೂ, ಹಿಟ್ಲರು ಬದುಕಿರುವನೆಂಬ ನಂಬಿಕೆ ಹೆಚ್ಚುತ್ತಿದೆಯೆಂದೂ ಹೇಳಲಾಗಿದೆ.

.....

ರೂರ್ ಪ್ರಾಂತ್ಯದ ನಿಯಂತ್ರಣ

ಲಂಡನ್ ಡಿ 20— ಜರ್ಮನಿಯಲ್ಲಿನ ರೋರ್ ಕಲ್ಲಿದ್ದಲು ಗಣಿಯನ್ನು ತಮ್ಮ ಅಧಿಕಾರಿಗಳ ನಿಯಂತ್ರಣಕ್ಕೆ ಒಳಪಡಿಸಬೇಕೆಂಬ ಬ್ರಿಟಿಷ್ ಸರಕಾರದ ಇಚ್ಛೆಯನ್ನು ಅದು ಬೇಗನೆ ಪ್ರಕಟಿಸಲಿರುವುದು. ಈ ಕಲ್ಲಿದ್ದಲು ಗಣಿಗಳಿರುವ ಪ್ರದೇಶಗಳು ಈಗ ಬ್ರಿಟಿಷ್ ಸೈನ್ಯಾಧಿಕಾರಿಗಳಿಂದ ಆಳಲ್ಪಡುವ ಪ್ರದೇಶಕ್ಕೆ ಸೇರಿರುವ ಕಾರಣ ಬ್ರಿಟಿಷ್, ಫ್ರೆಂಚ್, ರಷ್ಯನ್ ಮತ್ತು ಅಮೇರಿಕ ಪ್ರತಿನಿಧಿಗಳುಳ್ಳ ಒಂದು ಅಂತರರಾಷ್ಟ್ರೀಯ ಸಂಸ್ಥೆಯು ಏರ್ಪಡುವ ತನಕ ಈ ಗಣಿಯು ಬ್ರಿಟಿಷರ ಅಧಿಕಾರಕ್ಕೆ ಒಳಪಟ್ಟಿರಬೇಕಾಗುವುದೆಂದು ತಿಳಿಯಬರುತ್ತದೆ

.....

ದಸ್ತಗಿರಿ

ಪೆಷಾವರ್ ಡಿ 23— ಹೊಸದಾಗಿ ಗಡಿನಾಡು ಶಾಸನ ಸಭೆಗೆ ಚುನಾಯಿತರಾಗಿರುವ ಶ್ರೀ ವಜೀರ್ ಶಿವರಾಂರವರು ಮಾಡಿದ ಒಂದು ಆಕ್ಷೇಪಕರ ಭಾಷಣಕ್ಕಾಗಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

.....

ಅಲೆಹೊಡೆತದಿಂದ ನಷ್ಟ

ಕರಾಚಿ ಡಿ 23— ನವೆಂಬರ್ ತಿಂಗಳಲ್ಲಾದ ಭೂಕಂಪದ ಪರಿಣಾಮದ ಅಲೆಯು ಹೊಡೆತದಿಂದ 163 ಮಂದಿ ಗತ ಪ್ರಾಣರಾದರೆಂದೂ, 800 ಮಂದಿ ಮನೆ ಮಠಗಳಿಲ್ಲದೆ ನಿರ್ವಾತ್ರಿತರಾದರೆಂದೂ ರೂ. 214000 ಅಸ್ತಿಪಾಸ್ತಿ ನಷ್ಟವಾಯಿತೆಂದೂ ಅಧಿಕಾರಯುತ ಪ್ರಕಟಣೆ ತಿಳಿಸುತ್ತದೆ.

ಪಾಟ್ನದಲ್ಲಿ ಪಂ ॥ ನೆಹರು

ಪಾಟ್ನ, ಡಿ 24 — ಪ್ರಾಂತೀಯ ವಿದ್ಯಾರ್ಥಿ ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ಪಂ ॥ ನೆಹರುರವರು ನಾಡಿದ ಉಜ್ವಲ ಭಾಷಣದ ಸಾರಾಂಶ:—

ರಾಜಕೀಯ ಖೈದಿಗಳು ತುರುಗದಲ್ಲಿದ್ದುಕೊಂಡೇ ಭಾರತವನ್ನು ಹೊರಾಟಕ್ಕೆ ಅಣಿಯಾಗುವಂತೆ ಮಾಡುತ್ತಿದ್ದಾರೆ.

ರಾಜಬಂದಿಗಳನ್ನು ತುರುಗದಿಂದ ಬಿಡಿ ಎಂದು ಅಧಿಕಾರಿಗಳಲ್ಲಿ ವ್ಯಾರೆಯಿಡುವುದು ಅಸಮಂಜಸವು.

ಜೈ ಪ್ರಕಾಶ ನಾರಾಯಣ ಬಿಡುಗಡೆಗಾಗಿ ಅಖಂಡ ಭಾರತವೇ ಕೂಗುತ್ತಿದೆ.

ಸಂಗ್ರಾಮ ಅಂತ್ಯವಾದಗ್ಗೂ ಕದನ ವಿರೋಧಿಗಳು ಬಂಧನ ಮುದ್ರೆಯನ್ನು ಇನ್ನೂ ಹೊಂದಿರುವ ವಿಚಿತ್ರವೇನು?

ಆಗಸ್ಟ್ ಠರಾವು ಎಂದಿಗೂ ಭಾರತ ತ್ಯಾಗ ಮಾಡುವುದಿಲ್ಲ

ಪಂ ॥ ನೆಹರೂರವರಿಗೆ ವಿಶೇಷವಾ ಸ್ವಾಗತ ಸಮಾವೇತದಲ್ಲಿ ಸಿಕ್ಕಿತು.

ಹಳೆಯ ನಾಣ್ಯ

ಕೊಚ್ಚಿನ್ ದೇಶದಲ್ಲಿರುವ ವಾದಾ ಕಾನ್ಟೆರಿಯ ಸಮೀಪದಲ್ಲಿ ರೋಮನ್ನರ ಸಾಮ್ರಾಜ್ಯದ ಬಂಗಾರ ಮತ್ತು ಬೆಳ್ಳಿ ನಾಣ್ಯಗಳು ಮೊನ್ನೆ ಸಿಕ್ಕಿವೆ. ಬಂಗಾರದ ನಾಣ್ಯಗಳು ನೀರೊ, ಒಗುಸ್ತಸ್ ಮತ್ತು ತಿಬೆರಿಯಸ್ ಚಕ್ರವರ್ತಿಯದು ಬೆಳ್ಳಿಯ ನಾಣ್ಯಗಳು ಇತರ ರೋಮ್ ಮೊದಲಿನ ಚಕ್ರವರ್ತಿಯದು ಕೊಚ್ಚಿಗೂ ರೋಮ್ ಸಾಮ್ರಾಜ್ಯಕ್ಕೂ ಎರಡು ಸಾವಿರ ವರ್ಷಗಳ ಹಿಂದೆ ವ್ಯಾಪಾರ ಸಂಬಂಧವಿದ್ದಿತೆಂದು ಇದರಿಂದ ತಿಳಿಯುತ್ತದೆ.

ವಿವಿಧ ವೃತ್ತ

ಹಂಗೇರಿ ಸರ್ಕಾರವು ಜರ್ಮನ್ ಭಾಷೆಯಲ್ಲಿ ಮಾತನಾಡುವವರೆಲ್ಲರೂ ಹಂಗೇರಿ ಬಿಡಿರೆಂದು ಆಜ್ಞೆಯಿತ್ತಿದೆ.

ಂ ಂ

ಮಾಲೂರಿನಲ್ಲಿ ಪ್ರತಿಬಂಧಕ ಜಾರಿಯಾದ ಪ್ರಯುಕ್ತ ಕಾಂಗ್ರೆಸ್ ಸಭೆ ನಗರ ಸಭಾ ಗಡಿಯಾಚೆ ನಡೆಯಿತು.

ಂ ಂ

ತಿರುವಾಂಕೂರು ರಕ್ಷಣೆಗೆ ವಿರೋಧವಾಗಿ ಏರ್ಪಡಿಸಿದರೆಂದು ಅಲ್ಲಿಯ ಕೇಥೊಲಿಕ್ ಕಾಂಗ್ರೆಸ್ ಅಧ್ಯಕ್ಷ ಥರಿಯತ್ತು, ಕುಂಜತ್ತು ಉಪಾನ್ ಖೈದಾದರು.

ಂ ಂ

ಮತದಾನ ವಿನಃ ಜುನಾಗಢೆಯಲ್ಲಿ ಮತ್ಯಾವ ಚಟುವಟಿಕೆಯನ್ನು ಅಧಿಕಾರಿಗಳು ತೋರಿಕೂಡದೆಂದು ಮುಂಬಯಿ ಸರ್ಕಾರ ಆಜ್ಞೆಯಿತ್ತಿದೆ

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಂಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫೆಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

AT Opera— From 20-12-45

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ
ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

Morning Shows from 28—12—45

To be or not to be

L. N. Press

Sriramp:t MYSORE
For Good Printing

Edited, Printed and published by M. S. Krishna Rao, at the Satvavadi Press, Chamaraja Agrahar, Mysore

TRUE ART STUDIES

Beautiful Women. Photos from life. Actual photos of living models in different nations in daring position. Cabinet size Rs 15 per doz. Post card size Rs 12 per doz.

FRENCH ART SPECIAL

Every man likes to see. Life-like charmin posed. Love scenes. 200 different post card size. Rs 12 per doz. When ordering please state your age and occupation.

T.I.T. Post Box 21 Dacca

ರಣಜಿತ್

ಪೃಥ್ವಿರಾಜ್, ಷಣ್ಮುಖಂ, ಮೋನಿಕಾ, ದೇಶಾಯಿ, ಮುಂತಾದವರು ನಟಿಸಿರುವ

— ಗೌರಿ —

(ಹಿಂದಿ)

27-12-45 ರಿಂದ ಪ್ರತಿದಿನ 3 ಆಟ 3-30, 6-30 ಮತ್ತು 9-45 ಕ್ಕೆ

ಬೆಳಗಿನ ಪ್ರದರ್ಶನ — ಹಾಸ್ಪಿಟೆಲ್

— ಮೈಸೂರು ವಿದ್ಯಾರ್ಥಿ ಸಮ್ಮೇಳನದ ಸ್ವಾಗತ ಸಮಿತಿ ಅಶ್ರಯದಲ್ಲಿ ಶ್ರೀ ರಂಗಾಚಾರ್ಲು ಪುರಭವನದಲ್ಲಿ ನಿನ್ನೆ ದಿವಸ ಸಂಜೆ ವಿವಿಧ ವಿನೋದಾವಳಿ ಏರ್ಪಾಡಾಗಿತ್ತು. ವಿವರಗಳನ್ನು ತಿಳಿಸಲು ಸತ್ಯವಾದಿಗೆ ಆಹ್ವಾನವಿಲ್ಲ

ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

Stopped Menses

Use SURE SUCCESS PILLS. The quickest and most effective remedy for Delayed women. In millions of cases, these S. S. Pills have brought on the desired effect when other remedies had failed. Full strength Rs. 6-8-0, Maximum strength Rs. 10 post free.

Wanted stockists everywhere.

T. I. T. Post Box 21
Dacca 3.



ಸಂಯುಕ್ತ ಸಂಸ್ಥಾನದ ನೌಕೆಯು ಶತ್ರು ಧಾಳಿಯನ್ನು ಪ್ರತಿಭಟಿಸುತ್ತಿದೆ.

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿ ೧ ಕ್ಕೆ ಒಂದು ರೂಪಾಯಿ. ವಿಳಾಸ — ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು